‘ಚಿಂತನಶೀಲ ಕವಿ ಮನಸ್ಸು ಕಥನವೊಂದರ, ಅದರ ವಿನ್ಯಾಸವೊಂದರ ಮೂಲಕ ಪ್ರಕಟಿಸುತ್ತದೆ. ಆ ಚಿಂತನೆ, ವಿನ್ಯಾಸ ಇಲ್ಲದಿದ್ದರೆ ಗಂಭೀರ ನಾಟಕ ಆಗುವುದಿಲ್ಲ. ಅದು ಕರುಣಾಜನಕ ನಾಟಕವಾಗುತ್ತದೆ.’

ಲೇಡಿ ಮ್ಯಾಕ್‌ಬೆತ್ ಸಂದರ್ಭದಲ್ಲಿ ಟ್ರಾಜಿಕ್ ಐರನಿಯನ್ನು ವಿವರಿಸುವಾಗ, ‘ಭ್ರಮಿಸಿ ಕೆಡುಕನ್ನು ಆಯ್ದುಕೊಳ್ಳುವುದು ಮನುಷ್ಯನ ಅಜ್ಞಾನ; ಹ್ಯಾಮ್ಲೆಟ್‌ನಲ್ಲಿ ವ್ಯವಸ್ಥೆಯ, ಸಮಾಜದ ಅವನತಿಯಲ್ಲಿ, ತಾಯಿಯ ವಿಶ್ವಾಸದಿಂದ ವಂಚಿತನಾದವನಿಗೆ ಒಫೀಲಿಯಾಳ ಪ್ರೇಮದ ಆಧಾರವೂ ತಪ್ಪುತ್ತದೆ. ಯೌವನದ ಆದರ್ಶದಿಂದ ಉಂಟಾಗುವ ಭ್ರಾಂತಿಯಿಂದ ಹೊರಬಂದು ವಾಸ್ತವಿಕ ಅರಿವು ಉಂಟಾದಾಗ ತತ್ತರಗೊಳ್ಳುವ ಮನಸ್ಥಿತಿ ಹಾಮ್ಲೆಟ್‌ನ ಕೇಂದ್ರ’ – ಇಂತಹ ಮಾತುಗಳು ಎಲ್.ಎಸ್.ಎಸ್. ಅವರ ವಿಮರ್ಶೆಯ ಸೂಕ್ಷ್ಮಗಳನ್ನರಿಯಲು ಸಹಕಾರಿ.

ಕನ್ನಡದಲ್ಲಿ ಕಳೆದ 150 ವರುಷಗಳಿಂದ– ಅಂದರೆ, ಎಂ.ಎಲ್. ಶ್ರೀಕಂಠೇಗೌಡ, ಬಸವಪ್ಪ ಶಾಸ್ತ್ರಿ, ಗುಂಡೋಕೃಷ್ಣ ಚುರಮುರಿ, ಇವರ ಕಾಲದಿಂದ ಈಚಿನವರೆಗೆ ಶೇಕ್ಸ್‌ಪಿಯರನ ರೂಪಾಂತರ, ಅನುವಾದ, ಅಧ್ಯಯನಗಳು ಕನ್ನಡದಲ್ಲಿ ನಡೆಯುತ್ತಾ ಬಂದಿದೆ. ಹಲವು ವಿಮರ್ಶಕರು ಚಿಂತಕರು ಅವುಗಳ ಬಗ್ಗೆ ಬರೆದಿದ್ದಾರೆ. ಬಿ.ಎಂ.ಶ್ರೀ. ಯವರು 1941ರಲ್ಲೇ ಪ್ರೇಮ–ವಿಶ್ವಾಸಗಳು ಹೋದ ಸಮಾಜದ ಘೋರ ವಿನಾಶವನ್ನು ಪ್ರತಿನಿಧಿಸುವ ಕಿಂಗ್ ಲಿಯರ್ ಸಂದರ್ಭದಲ್ಲಿ, ಗಾಢಾನುಭವದ ಶಾಂತಿ ರುದ್ರನಾಟಕದ ಫಲ ಎಂದರು. ಅದನ್ನು ಗ್ರಹಿಸುವ ಮನಸ್ಸಿನ ಪ್ರಕ್ರಿಯೆಯಲ್ಲಿ ದುಃಖಾಂತ, ಮನಶ್ಶಾಂತಿ, ಮೋಕ್ಷ ಅವರು ಗುರುತಿಸಿದ ನಡೆಗಳು. ಎಲ್.ಎಸ್. ಶೇಷಗಿರಿರಾಯರ ಶೇಕ್ಸ್‌ಪಿಯರ್ ವಿಮರ್ಶೆ ಶೇಕ್ಸ್‌ಪಿಯರ್ ಬಗ್ಗೆ ಇರುವ ಕನ್ನಡ ಸಾಹಿತ್ಯ–ವಿಮರ್ಶಾ ಚರಿತ್ರೆ ಹಾಗೂ ಜಾಗತಿಕ ಸಾಹಿತ್ಯದಲ್ಲಿ ಶೇಕ್ಸ್‌ಪಿಯರ್ ಬಗೆಗಿನ ಮಹತ್ವದ ವಿಮರ್ಶೆಗಳನ್ನು ಚರ್ಚಿಸುತ್ತಾ ತನ್ನ ವಿಚಾರಗಳನ್ನು ಮುಂದಿಡುತ್ತದೆ.

**ಇಂಗ್ಲಿಷ್ ಸಾಹಿತ್ಯ ಚರಿತ್ರೆ, ಆಧುನಿಕ ವಿಮರ್ಶೆ ಮತ್ತು ಯುರೋಪಿಯನ್ ಸಾಹಿತ್ಯ**

‘ಇಂಗ್ಲಿಷ್ ಸಾಹಿತ್ಯ ಚರಿತ್ರೆ’ ಮತ್ತು ‘ಇಂಗ್ಲಿಷ್ ಭಾಷೆಯಲ್ಲಿ ಆಧುನಿಕ ವಿಮರ್ಶೆ’ ಎಂಬ ಎರಡು ಕೃತಿಗಳ ಮೂಲಕವೂ ಕನ್ನಡ ಸಾಹಿತ್ಯಕ್ಕೆ ಎಲ್.ಎಸ್. ಶೇಷಗಿರಿರಾಯರು ಮಹತ್ವದ ಕೊಡುಗೆ ನೀಡಿದ್ದಾರೆ. ಕನ್ನಡ ಮತ್ತು ಸಂಸ್ಕೃತ ಭಾಷೆಗಳಿಗೆ ಹಿಂದೆ ಇದ್ದ ನಂಟನಂತೆ ಇಪ್ಪತ್ತನೇ ಶತಮಾನದಿಂದ ಇಂಗ್ಲಿಷ್ ಜೊತೆಗಿನ ನಮ್ಮ ಹೊಸ ಬಾಂಧವ್ಯ ಸರ್ವವಿದಿತ. ನವೋದಯ, ನವ್ಯ ಎರಡು ಸಾಹಿತ್ಯ ಚಳವಳಿಗಳೂ ಇಂಗ್ಲಿಷ್ ಭಾಷೆ, ಸಾಹಿತ್ಯಗಳನ್ನು ಬಳಸಿಕೊಂಡಿವೆ. ಅಲ್ಲದೆ ತಮ್ಮದೇ ಆದ ರೀತಿಯಲ್ಲಿ ಸ್ವಂತಿಕೆಯಿಂದ ಇಂಗ್ಲಿಷನ್ನು ಬಳಸಿ ಪುಷ್ಟಿಗೊಂಡ ಕನ್ನಡ ಸಾಹಿತ್ಯ–ಭಾಷೆ ಬೆಳೆದಿದೆ. ಆಧುನಿಕ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಇಂಗ್ಲಿಷ್ ಸಾಹಿತ್ಯ, ವಿಮರ್ಶೆಗಳಿಂದ ಪಡೆದುದಕ್ಕೊಂದು ಸ್ಥಾನವಿದೆ. ಕನ್ನಡಕ್ಕೆ ಬರಬೇಕಾದ ಇಂಗ್ಲಿಷ್ ಸಾಹಿತ್ಯದ ಆಕರರೂಪಿ ಕೆಲಸ (Foundational work) ಮಾಡಿದ ಮುಖ್ಯರಲ್ಲಿ ಎಲ್.ಎಸ್.ಎಸ್. ಒಬ್ಬರು.



ಪಾಶ್ಚಾತ್ಯ ಸಾಹಿತ್ಯವನ್ನು ಕುರಿತ ವಿಮರ್ಶಾತ್ಮಕ ಹಾಗೂ ಚರಿತ್ರಾತ್ಮಕ ಉದ್ಗ್ರಂಥಗಳ ರಚನೆಯಲ್ಲಿ ಪ್ರಾಚಾರ್ಯ ಎಸ್.ವಿ. ರಂಗಣ್ಣನವರ ಪರಂಪರೆಯನ್ನು ಮುಂದುವರಿಸಿದ ಎಲ್.ಎಸ್.ಎಸ್. ಅವರನ್ನು ಪ್ರಶಂಸಿಸುವ ವಿಮರ್ಶಕ ಕೆ.ನರಸಿಂಹಮೂರ್ತಿಯವರು, ‘ಇಂಗ್ಲಿಷ್ ಭಾಷೆಯಲ್ಲಿ ಆಧುನಿಕ ಸಾಹಿತ್ಯ ವಿಮರ್ಶೆ’ ಕೃತಿ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆ ಶೋಧಿಸುತ್ತಿರುವ ಹೊಸ ಮೌಲ್ಯಗಳಿಗೆ ದಿಕ್ಸೂಚಿಯಾದರೆ, ಅವರ ‘ಇಂಗ್ಲಿಷ್ ಸಾಹಿತ್ಯ ಚರಿತ್ರೆ’ ಅವರ ವಿದ್ವತ್ತಿಗೆ ಮುಕುಟಪ್ರಾಯವಾಗಿದೆ ಎಂದಿದ್ದಾರೆ. 2001ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ